ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ
ಇಂಜಿನಿಯರ್(ವಿ) ರವರ ಕಛೇರಿ,
ಕಾ ಮತ್ತು ಪಾ ಉಪವಿಭಾಗ, ಹೂಟಗಳ್ಳಿ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2404922

CHAMUNDESHWARI
ELECTRICITY SUPPLY
CORPORATION LIMITED
(A GOVERNMENT OF KARNATAKA UNDERTAKING)
Office of the Asst.Executive
Engineer(Ele.), O&M Sub Division,
Hootagally, CESC,
Mysuru.
Web Site: www.cescmysore.org
E-mail ID: aeehtgmys@gmail.com

Company Identity Number[CIN]:- U40109KA2004SGCO35177

ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾ)/ಹೂ-ಉವಿ/2021-22/ 3629-31 ದಿನಾಂಕ: 23.12.2021
ಲಗತ್ತು:

# ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 21.12.2021 ರಂದು ಬೆಳಿಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಮತಿ ಅನಿತಾ ಎಸ್.ಬಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ರಾವ್ ಹೆಚ್.ಆರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
3. ಶ್ರೀ. ಲಕ್ಷ್ಮೀಶ ಕೆ.ಕೆ., ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು.
4. ಶ್ರೀ ಮಂಜು ಕೆ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ
5. ಶ್ರೀ ಮಂಜುನಾಥ.ಎಸ್, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಶಾಖೆ
6. ಶ್ರೀ ಸಿದ್ದಲಿಂಗ ಜಿ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಬೋಗಾದಿ ಶಾಖೆ
7. ಶ್ರೀ ಶಿವಪ್ರಸಾದ್, ಸಹಾಯಕ ಇಂಜಿನಿಯರ್(ವಿ), ರೂಪನಗರ ಶಾಖೆ
8. ಶ್ರೀ ಕೇಶವಮೂರ್ತಿ, ಸಹಾಯಕ ಇಂಜಿನಿಯರ್(ವಿ), ಇಲವಾಲ ಶಾಖೆ
9. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ
10. ಶ್ರೀ ಸೋಮಶೇಖರ್, ಕಿರಿಯ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಶಾಖೆ
11. ಶ್ರೀ ಸುಗಂಧರಾಜ್, ಕಿರಿಯ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಇಲವಾಲ ಶಾಖೆ
12. ಶ್ರೀಮತಿ ಎಸ್.ಶಿಲ್ಪ, ಹಿರಿಯ ಸಹಾಯಕಿ, ಹೂಟಗಳ್ಳಿ ಉಪವಿಭಾಗ, ಮೈಸೂರು

**ಸಭೆಗೆ ಹಾಜರಿದ್ದ ಜನರು :**

1. ಶ್ರೀ ದಿಲೀಪ್ #6424, ವಿಜಯನಗರ 4ನೇ ಹಂತ, ಮೈಸೂರು-570018, ಮೋ : 9591405003
2. ಶ್ರೀ ಪ್ರಕಾಶ್ ವೈ.ಸಿ #231, ವಿಜಯನಗರ 3ನೇ ಹಂತ, ಮೋ : 9741120413

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿ ಹಾಗೂ ನೌಕರರನ್ನು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಜನರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

Scanned by TapScanner

ದಿನಾಂಕ : 02.09.2021 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು : 2

ದಿನಾಂಕ : 21.12.2021 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 1

**ದಿನಾಂಕ : 02.09.2021 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಪ್ರಭಾಕರ್, ಆನಂದೂರು ಗ್ರಾಮ, ಇಲವಾಲ ಹೋಬಳಿ, ಮೈಸೂರು.<br>&<br>ಶ್ರೀ ವಿಜೇಂದ್ರ, ನಾಗನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು. | ▪ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ ನಿರಂತರವಾಗಿ 7 ಘಂಟೆ 3 ಫೇಸ್ ವಿದ್ಯುತ್ ನೀಡುತ್ತಿರುವುದನ್ನು ಶ್ಲಾಘಿಸುತ್ತ, ವಿದ್ಯುತ್ ಅಡಚಣೆಗಳಿದ್ದಲ್ಲಿ 3-4 ದಿನ ಮುಂಚಿತವಾಗಿ ತಿಳಿಸುವಂತೆ ಕೇಳಿಕೊಂಡರು.<br>▪ ಮಳೆ-ಗಾಳಿ ಬಂದರೆ ವಿದ್ಯುತ್ ಅಡಚಣೆ ಉಂಟಾದರೆ, ರೀಪೇರಿ ಆಗುವವರೆಗೂ ಆನಂದೂರು ಗ್ರಾಮಕ್ಕೆ ವಿದ್ಯುತ್ ಸಂಪರ್ಕವಿರುವುದಿಲ್ಲ, Change Over option ಇಲ್ಲದಿರುವುದರಿಂದ, ಬೇರೊಂದು ಫೀಡರ್‌ನಿಂದ ಈ ವ್ಯವಸ್ಥೆ ಮಾಡಿಕೊಡಬೇಕಾಗಿ ಕೋರಿದರು. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಆನಂದೂರು ಗ್ರಾಮಕ್ಕೆ Change Over option ಬಗ್ಗೆ ಇಲವಾಲ ಶಾಖಾಧಿಕಾರಿಯವರನ್ನು ಪ್ರಶ್ನಿಸಲಾಗಿ, ಇಲವಾಲ ಶಾಖಾಧಿಕಾರಿಯವರು ಉತ್ತರಿಸಿ, ಈ ಗ್ರಾಮದಲ್ಲಿ ರೈಲ್ವೆ ಕ್ರಾಸಿಂಗ್ ಬರುವುದರಿಂದ Alternateve Feeder ಕೇಬಲ್ ಮಾಡಲಾಗಿರುವುದಿಲ್ಲ ಎಂದು ತಿಳಿಸಿದರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದೇಶದಂತೆ ಇಲವಾಲ ಶಾಖಾಧಿಕಾರಿಯವರು ಅಂದಾಜುಪಟ್ಟಿಯನ್ನು ತಯಾರಿಸಿ ಈಗಾಗಲೆ ಸಲ್ಲಿಸಲಾಗಿರುತ್ತದೆ. |
| 2 | ಶ್ರೀ ನಾಗರಾಜು, ಗುತ್ತಿಗೆದಾರರು, ಕುವೆಂಪು ಎಲೆಕ್ಟ್ರೀಕಲ್ಸ್ ಹಾಗೂ KSLE-CA ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು. | ▪ ತಂತ್ರಾಂಶದ ತೊಂದರೆಯಿಂದಾಗಿ ತಾತ್ಕಲಿಕ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಆಗುತ್ತಿರುವ ತೊಂದರೆಗಳ | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ತಂತ್ರಾಂಶದ ತೊಂದರೆ ಎಲ್ಲಾ ಕಡೆಗಳಲ್ಲು ಇರುವುದಾಗಿ ತಿಳಿಸಿ, ಈ ಬಗ್ಗೆ ಈಗಾಗಲೆ ಮೇಲಾಧಿಕಾರಿಗಳ |

Scanned by TapScanner

| | | | |
|---|---|---|---|
| | | ಬಗ್ಗೆ ತಿಳಿಸಿದರು.<br>▪ ತಾತ್ಕಲಿಕ ಸ್ಥಾವರಗಳ ನವೀಕರಣ ಮಾಡುವ ಸಂಧರ್ಭದಲ್ಲಿ ತಂತ್ರಾಂಶದ ತೊಂದರೆ ಇದ್ದಾಗ ಬೇರೆ ಉಪವಿಭಾಗಗಳಲ್ಲಿ ಮಾಡುವಂತೆ Manual ರಶೀದಿ ಹಾಕಿ ನವೀಕರಣ ಮಾಡಿಕೊಡುವಂತೆ ಕೋರಿದರು.<br>▪ ಉಪವಿಭಾಗ ಮತ್ತು ವಿಭಾಗೀಯ ಕಚೇರಿಗಳ ಅಧಿಕಾರಿಗಳು ಹೆಚ್ಚು ಸಭೆಗಳನ್ನು ಮಾಡುವುದರಿಂದ ಗುತ್ತಿಗೆದಾರರಿಗೆ ಮತ್ತು ಗ್ರಾಹಕರಿಗೆ ಆಗುವ ತೊಂದರೆಗಳ ಬಗ್ಗೆ ವಿವರಿಸಿ, ಸಭೆಗಳನ್ನು ಕಡಿಮೆ ಮಾಡುವಂತೆ ಕೋರಿದರು. | ಹಾಗೂ ನಿಗಮ ಕಛೇರಿ ಸಂಬಂಧಪಟ್ಟ ಶಾಖೆಯ ಗಮನಕ್ಕೆ ತರಲಾಗಿದ್ದು, ಶೀಘ್ರವಾಗಿ ಬಗೆಹರಿಯುವ ವಿಶ್ವಾಸವನ್ನು ವ್ಯಕ್ತಪಡಿಸಿದರು.<br>▪ ತಾತ್ಕಲಿಕ ಸ್ಥಾವರಗಳ ನವೀಕರಣ ಮಾಡುವ ಸಂಧರ್ಭದಲ್ಲಿ ತಂತ್ರಾಂಶದ ತೊಂದರೆ ಇದ್ದಾಗ ಬೇರೆ ಉಪವಿಭಾಗಗಳಲ್ಲಿ ಯಾವ ರೀತಿಯಲ್ಲಿ ಮಾಡಲಾಗುತ್ತಿದೆ ಎಂದು ತಿಳಿದು ಏಕರೂಪದ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಹಿರಿಯ ಸಹಾಯಕಿರವರಿಗೆ ಸೂಚಿಸಿದರು.<br>▪ ಹೆಚ್ಚು ಸಭೆಗಳನ್ನು ಮಾಡುವುದರ ಬಗ್ಗೆ ಮಾತಾನಾಡುತ್ತ, ಪ್ರಗತಿ ಪರಿಶೀಲನಾ ಸಭೆಗಳು ಹಾಗೂ ಹೊಸ ಯೋಜನೆಗಳಿಗೆ ಸಂಬಂಧಿಸಿದಂತೆ ಕಳೆದ ತಿಂಗಳು ಹೆಚ್ಚು ಸಭೆಗಳು ನಡೆದಿದ್ದು, ಸಭೆಗಳ ನಡುವೆಯು ಗುತ್ತಿಗೆದಾರರಿಗೆ ಮತ್ತು ಗ್ರಾಹಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು. |

**ದಿನಾಂಕ : 21.12.2021 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ಅಹವಾಲುಗಳು ಈ ಕೆಳಕಂಡಂತಿರುತ್ತದೆ.**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | **ದೀಲೀಪ್**<br>**#6424, ವಿಜಯನಗರ 4ನೇ ಹಂತ, ಮೈಸೂರು-570018**<br>**ಮೋ : 9591405003**<br>**ಪ್ರಕಾಶ್ ವೈ.ಸಿ**<br>**#231, ವಿಜಯನಗರ 3ನೇ** | ▪ ಇವರು ತಮ್ಮ ಬಹುಮಹಡಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆಯಲು Occupancy Certificate ಸಲ್ಲಿಸುವಂತೆ ಸೂಚಿಸಲಾಗಿದ್ದು, | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಬಹುಮಹಡಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆಯಲು Occupancy Certificate ಸಲ್ಲಿಸುವುದು |

Scanned by TapScanner

| | | | |
|---|---|---|---|
| | ಹಂತ,<br>ಮೋ : 9741120413 | ಸಂಬಂಧಪಟ್ಟ ಪ್ರಾಧಿಕಾರದಿಂದ ವಿದ್ಯುತ್ ಸಂಪರ್ಕ ಪಡೆದ ನಂತರ ಸಲ್ಲಿಸುವುದಾಗಿ ಕೋರಿದರು. | ಕಡಾಯವಾಗಿರುವುದರಿಂದ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ಸಲ್ಲಿಸಿ ನಂತರ ವಿದ್ಯುತ್ ಸಂಪರ್ಕವನ್ನು ಪಡೆಯಲು ಸೂಚಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆಧ್ಯತೆ ಮೇರೆಗೆ ಬಗೆಹರಿಸಲು ತಿಳಿಸಿ, ಭಾಗವಹಿಸಿದ ಗ್ರಾಹಕರಿಗೆ ಹಾಗೂ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ

Scanned by TapScanner